

ಇತ್ತೀಚಿನ ಹಾಗೂ ಭವಿಷ್ಯದ ದಾಂಪತ್ಯಗಳು ಎತ್ತ ಸಾಗುತ್ತಿವೆ?

ಡಾ.ವಿನೋದ ಛೆಬ್ಬಿ

# 216: ಆಧುನಿಕ ದಾಂಪತ್ಯ- 1

ಕೆಲವು ದಿನಗಳಿಂದ ಒಂದು ವಿಷಯ ನನ್ನ ತಲೆ ತಿನ್ನುತ್ತಿತ್ತು. ಬಹುಶಃ ನಾವೆಲ್ಲರೂ ಮದುವೆ ಆಗಿದ್ದೇವೆ, ಅಥವಾ ಆಗುತ್ತೇವೆ. ಕೆಲವೊಮ್ಮೆ ಮತ್ತೆ ಮತ್ತೆ ಆಗುತ್ತೇವೆ. ಆದರೆ ಯಾಕಾಗುತ್ತೇವೆ? ದಾಂಪತ್ಯದ ಹಿಂದಿನ ಉದ್ದೇಶ ಏನಿದೆ? ಎಲ್ಲರ ಉದ್ದೇಶವೂ ಒಂದೇಯೆ, ಅಥವಾ ಬೇರೆಬೇರೆಯೆ? ದಾಂಪತ್ಯಗಳು ಮೊದಲಿನಿಂದ ಇವೆಯಾದರೂ ಉದ್ದೇಶಗಳು ಹಾಗೆಯೇ ಉಳಿದಿವೆಯೆ, ಅಥವಾ ಬದಲಾಗುತ್ತಿವೆಯೆ? ಹೀಗೆ ದಾಂಪತ್ಯಗಳನ್ನು ಮನೋಸಾಮಾಜಿಕ ಹಾಗೂ ಅಂತರ್ವೈಯಕ್ತಿಕ ಮಗ್ಗುಲುಗಳಿಂದ ಇಣುಕುವ, ಹಾಗೂ ಅವುಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಅರಿಯುವ ಮನಸ್ಸಾಯಿತು. ಅದನ್ನೇ ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ. ಮೂರು ತಿಂಗಳ ಹಿಂದೆ ಉಜಿರೆಯ ಕಾಲೇಜಿನ ಮನಶಾಸ್ತ್ರ ವಿಭಾಗವು ಯೋಜಿಸಿದ ಸಮ್ಮೇಳನದಲ್ಲಿ ಕಾರ್ಯಾಗಾರವೊಂದನ್ನು ನಡೆಸಿದೆ. ವಿಷಯ? 'ಬದಲಾಗುತ್ತಿರುವ ದಾಂಪತ್ಯ ಸಂಬಂಧಗಳು'. ಕಳೆದ ಕೆಲವು ದಶಕಗಳಿಂದ ನಮ್ಮ ದಾಂಪತ್ಯಗಳು ನಡೆದುಕೊಂಡು ಬರುತ್ತಿರುವ ದಾರಿಯನ್ನು ಹೇಗೆ ತೋರಿಸುವುದು ಎನ್ನುತ್ತಿರುವಾಗ ಒಂದು ಉಪಾಯ ಹೊಳೆಯಿತು. ಹಳೆಯ, ಈಗಿನ ಹಾಗೂ ಭವಿಷ್ಯದ ದಂಪತಿಗಳನ್ನು ಪ್ರತಿನಿಧಿಸಲು ನಿಶ್ಚಯಿಸಿ, ಅದಕ್ಕೆ ತಕ್ಕ ವಯಸ್ಸಿನ ಮೂರು ವಿಧದ ಜೋಡಿಗಳನ್ನು ಪ್ರೇಕ್ಷಕ ವರ್ಗದಿಂದಲೇ ಆರಿಸಿಕೊಂಡೆ. ಒಂದು ಜೋಡಿ ಎಪ್ಪತ್ತರ ಆಚೆಯದು; ಎರಡನೆಯ ಜೋಡಿ ಹೊಸದಾಗಿ ಮದುವೆಯಾಗಿ ನೆಲೆಯೂರಿದ ತರುಣ ದಂಪತಿಯದು; ಮೂರನೆಯದರಲ್ಲಿ ಡೇಟಿಂಗ್‌ನಲ್ಲಿ ತೊಡಗಿರುವ ಹುಡುಗ ಹುಡುಗಿ ಇದ್ದಾರೆ– (ಅಂದಹಾಗೆ ಡೇಟಿಂಗ್ ಎಂಬುದಕ್ಕೆ ಒಡನಾಟ ಎಂಬ ಪದವನ್ನು ಹುಡುಕಿಕೊಂಡಿದ್ದೇನೆ.) ಮೂರೂ ಜೋಡಿಗಳನ್ನು ವೇದಿಕೆಗೆ ತಂದು ಹಲವಾರು ಪ್ರಶ್ನೆಗಳನ್ನು ಮುಂದಿಟ್ಟೆ. ಅವರಿಂದ ಬಂದ ಉತ್ತರಗಳು ಹಾಗೂ ಪ್ರೇಕ್ಷಕರಿಂದ ಬಂದ ಅಭಿಪ್ರಾಯಗಳು ಆಸಕ್ತಿಯಿಂದ ತುಂಬಿದ್ದವು. ಅದನ್ನೇ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ನಾನು ಕೇಳಿದ ಮೊದಲ ಪ್ರಶ್ನೆ: 'ನೀವು ಮದುವೆ ಯಾಕಾಗುತ್ತೀರಿ?' ದಾಂಪತ್ಯದ ಬಗೆಗೆ ವೈಯಕ್ತಿಕ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇಕಾಗಿತ್ತು. ಇದಕ್ಕೆ ವೃದ್ಧ ಜೋಡಿಯಲ್ಲಿ ಗಂಡ ಉತ್ತರ ಕೊಟ್ಟಿದ್ದು, ವಯಸ್ಸಾದ ತಾಯ್ತಂದೆಯರನ್ನು ನೋಡಿಕೊಳ್ಳಲು ಅವರಿಗೊಂದು ಹೆಣ್ಣು ಬೇಕಿತ್ತಂತೆ. ಅವರೇ ಸ್ವತಃ ನೋಡಿಕೊಳ್ಳಬಹುದಿತ್ತಲ್ಲವೆ ಎಂದು ಕೇಳಿದ್ದಕ್ಕೆ ಅವರು ಸಮಜಾಯಿಷಿ ಕೊಟ್ಟಿದ್ದು ಏನು? ಅವರು ದೊಡ್ಡ ಊರಿನಲ್ಲಿ ಉದ್ಯೋಗ ಹೊಂದಿದ್ದರಂತೆ. ಹೆತ್ತವರು ಹಳ್ಳಿಯಲ್ಲಿ ಇದ್ದರಂತೆ. ಅಂದರೆ ಮದುವೆಯಾಗುವ ಉದ್ದೇಶದಲ್ಲೇ ಗಂಡ–ಹೆಂಡತಿ ಬೇರೆಬೇರೆ ವಾಸಿಸಬೇಕು ಎಂದಿದೆ! ಇನ್ನು ಹೆಂಡತಿಯ ಉತ್ತರ? 'ನಮ್ಮ ಅಪ್ಪ ಅಮ್ಮ ಮದುವೆ ಮಾಡಿದರು, ಆದೆ.' ಅಂದರೆ ಇಬ್ಬರೂ ಮದುವೆ ಆಗಿರುವುದು ಹೆತ್ತವರ ಮಾತು ಪಾಲಿಸಲು ಎಂಬುದು ಸ್ಪಷ್ಟವಾಗುತ್ತದೆ. ಅಂದಹಾಗೆ ಆಗ ಅವರಿಬ್ಬರ ವಯಸ್ಸು ಇಪ್ಪತ್ತೊಂದು ಹಾಗೂ ಹದಿನೈದು.

ಅದೇ ಪ್ರಶ್ನೆಗೆ ತರುಣ ಗಂಡ ಹೇಳಿದ್ದು: ಕೆಲಸ ಮುಗಿಸಿ ಉದ್ಯೋಗಸ್ಥನಾದ ಅವನಿಗೆ ವಾಸಿಸಲು ನೆಲೆಯೊಂದು ಬೇಕಿತ್ತು. ಹೆಂಡತಿಗೆ ಶಿಕ್ಷಣ ಮುಗಿದು ಮುಂದೇನು ಎನ್ನುವಾಗ ಸಮಾಜ ಸಹಜ ಹೆಜ್ಜೆ ಮದುವೆ ಹಾಗೂ ಮಕ್ಕಳು ಎಂದಿತ್ತು. ತರುಣಿಗೆ ಕೌಟುಂಬಿಕ ಸ್ನೇಹ–ಸಾಂಗತ್ಯ ಬೇಕಿತ್ತು. ಅಷ್ಟೊತ್ತಿಗೆ ಹಿರಿಯರು ಮದುವೆ ಮಾಡಿದರು. ಅಂದಹಾಗೆ ಎರಡು ವರ್ಷಕ್ಕೆ ಅವರಿಗೊಂದು ಮಗುವಾಗಿದೆ.

ಒಡನಾಟದಲ್ಲಿ ಇರುವ ಜೋಡಿ ಹೇಳಿದ್ದು ಪೂರ್ತಿ ಭಿನ್ನವಾಗಿತ್ತು. ತನಗೆ ಸಂಗಾತಿ, ಹಾಗೂ ಅವರೊಡನೆ ಅರ್ಥವತ್ತಾದ ಸಂಬಂಧ ಬೇಕಾಗಿದೆ ಎಂದರು. ಹಂಚಿಕೊಳ್ಳುವುದು ಹಾಗೂ ಸ್ಪಂದಿಸುವುದು ಮಾತ್ರ ಅವರ ಉದ್ದೇಶವಾಗಿತ್ತು. ಮದುವೆಯ ಯೋಚನೆ ಸದ್ಯಕ್ಕೆ ಖಂಡಿತವಾಗಿಯೂ ಇಲ್ಲ ಎಂದರು. ಒಂದುವೇಳೆ ಆಗುವುದಾದರೆ ಇವನ/ಳನ್ನೇ ಎನ್ನುವುದೂ ಖಾತರಿಯಿಲ್ಲ ಎಂದರು.

ಇದರರ್ಥ ಏನು? ಸಾಂಗತ್ಯಕ್ಕೆ ಮಹತ್ವ ಕೊಡದೆ ಮದುವೆಯನ್ನು ಬಯಸುವುದು ಒಂದು ಕಡೆಯಾದರೆ ಮದುವೆಗೆ ಮಹತ್ವ ಕೊಡದೆ ಸಾಂಗತ್ಯ ಬಯಸುವುದು ಇನ್ನೊಂದು ಕಡೆಗಿದೆ!

ಚರ್ಚೆಯಲ್ಲಿ ಗೈರುಹಾಜರಿಯ ಮೂಲಕ ಎದ್ದುಕಂಡ ವಿಷಯ ಏನೆಂದರೆ, ಮದುವೆ ಆಗುವುದು ಲೈಂಗಿಕ ಬದುಕಿಗಾಗಿ ಎಂದು ಯಾರೂ ಉತ್ತರಿಸಲಿಲ್ಲ! ತಾಯಿ–ಮಗ, ತಂದೆ–ಮಗಳು, ಸೋದರ–ಸೋದರಿ ಮುಂತಾದ ಮಾನವೀಯ ಸಂಬಂಧಗಳ ಪೈಕಿ ಯಾವುದರಲ್ಲಿ ಲೈಂಗಿಕ ಸಂಬಂಧವನ್ನು ಒಪ್ಪಿಕೊಳ್ಳಲಾಗಿದೆ ಎಂಬ ಪ್ರಶ್ನೆಗೆ ಎಲ್ಲರಿಗೂ ಉತ್ತರ ಗೊತ್ತಿತ್ತು. ಹಾಗಿದ್ದರೂ 'ದಾಂಪತ್ಯ ಎಂದರೆ ಲೈಂಗಿಕ ಬದುಕಿಗೆ ಸುರಕ್ಷಿತ ತಾಣ' ಎಂದು ಒಬ್ಬರೂ ಉತ್ತರಿಸಲಿಲ್ಲ– ಪ್ರೇಕ್ಷಕರಲ್ಲಿ ಕೆಲವರ ಹೊರತು. ಯಾಕೆಂದು ಕೆದಕಿ ಕೇಳಿದಾಗ ಮದುವೆಯ ಜೊತೆಗೆ ಲೈಂಗಿಕ ಕ್ರಿಯೆಯೂ ಇದ್ದೇ ಇರುತ್ತದೆ ಎಂಬ ಸಾಮಾನ್ಯ ಗ್ರಹಿಕೆ ಹೊರಕಂಡಿತು. ಆದರೆ ವಾಸ್ತವವಾಗಿ ಹಾಗೆ ಇರಬೇಕೆಂದಿಲ್ಲ; ಮದುವೆಯಾಗಿ ಸುಮಾರು ಕಾಲ ಕಳೆದರೂ ಲೈಂಗಿಕ ಬದುಕು ಕಾಣದಿರುವ ಸಾಕಷ್ಟು ದಂಪತಿಗಳೂ ಇದ್ದಾರೆ ಎಂದಾಗ ಆಶ್ಚರ್ಯ ವ್ಯಕ್ತವಾಯಿತು. ಅದಲ್ಲದೆ, ಮದುವೆಯಾದ ಸಂಗಾತಿಯ ಜೊತೆಗೆ ನಡೆಸುವ ಲೈಂಗಿಕ ಬದುಕು (ಲೈಂಗಿಕ ಕ್ರಿಯೆ ಮಾತ್ರವಲ್ಲ) ತನಗೆ ಹಿಡಿಸಬಹುದೆ ಎಂಬ ಪ್ರಶ್ನೆ ಯಾರಿಗೂ ಹೊಳೆದಂತೆ ಕಾಣಲಿಲ್ಲ.

ನನ್ನ ಮುಂದಿನ ಪ್ರಶ್ನೆ ವಿವಾಹಪೂರ್ವ ಲೈಂಗಿಕ ಸಂಪರ್ಕದ ಬಗೆಗಿತ್ತು. ಇದಕ್ಕೆ ವೃದ್ಧ ದಂಪತಿಯ ಉತ್ತರ ನೇರವಾಗಿತ್ತು. ಮದುವೆಯ ತನಕ ಲೈಂಗಿಕ ಕ್ರಿಯೆ ಬೇಡ; ಮದುವೆಯ ನಂತರ ಹೇಗೆಯೇ ನಡೆದರೂ ದಾಂಪತ್ಯದ ಚೌಕಟ್ಟಿನೊಳಗೆ ನಡೆಯಬೇಕು. ಕಾರಣ ಕೇಳಿದಾಗ, ಇವರ ನಿಷೇಧ ಒಂದು ಮೌಲ್ಯವಾಗಿರದೆ ಅವರ ಹಿರಿಯರು ಹೇಳಿಕೊಟ್ಟ ಕಟ್ಟಪ್ಪಣೆ ಆಗಿತ್ತು ಎಂದು ಗೊತ್ತಾಯಿತು! ಈ ಪ್ರಶ್ನೆಗೆ ಒಡನಾಟದಲ್ಲಿ ಇರುವ ಹುಡುಗಿ ಉತ್ತರ ಕೊಟ್ಟಿದ್ದು ಪೂರ್ತಿ ಬೇರೆಯಾಗಿತ್ತು. ಒಡನಾಟ ಸುರಕ್ಷಿತ ಎನಿಸಿದರೆ ಲೈಂಗಿಕ ಕ್ರಿಯೆ ನಡೆಯಲು ಅಡ್ಡಿಯಿಲ್ಲ, ಹಾಗೂ ಅದು ಇಬ್ಬರಿಗೂ ಒಪ್ಪಿಗೆ ಆಗಿರಬೇಕು ಎಂದಳು. ಈ ಅನಿಸಿಕೆಯ ಹಿನ್ನೆಲೆ ವಿಚಾರಿಸಿದಾಗ ಗೊತ್ತಾಗಿದ್ದು ಏನು? ಸಂಗಾತಿಯ ಜೊತೆಗೆ ಸುರಕ್ಷಿತ ಭಾವ ಎನ್ನಿಸುವುದು ಲೈಂಗಿಕ ಸಂಬಂಧಗಳಿಗೆ ಮುಖ್ಯ ಎನ್ನುವುದು ಆಕೆಯ ಅಭಿಪ್ರಾಯವಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ ವೃದ್ಧ ದಂಪತಿಯು ಲೈಂಗಿಕ ಕ್ರಿಯೆಯನ್ನು ಒಂದು ಕರ್ತವ್ಯವೆಂದು ಭಾವಿಸುತ್ತ, ಸಂಗಾತಿಯ ಇಷ್ಟಾನಿಷ್ಟಗಳಿಗೆ ಬೆಲೆ ಕೊಡದಿದ್ದುದು ಕಂಡುಬಂತು. ಅಷ್ಟಲ್ಲದೆ, ಹೆಚ್ಚಿನ ದಂಪತಿಗಳಿಗೆ ಲೈಂಗಿಕ ಕ್ರಿಯೆಗೂ ಲೈಂಗಿಕ ಬದುಕಿಗೂ ವ್ಯತ್ಯಾಸ ಗೊತ್ತಿಲ್ಲ ಎನ್ನುವುದೂ ನಿಚ್ಚಳವಾಯಿತು.

ಚರ್ಚೆಯಲ್ಲಿ ದಾಂಪತ್ಯದ ಸ್ಥಿರತೆಯ ಮಾತೂ ಬಂತು. ಮುಂಚೆಯೆಲ್ಲ ಸಂಬಂಧವನ್ನು ಆಜೀವ ಪರ್ಯಂತ, ಶಾಶ್ವತ ಎಂದು ನಂಬಿಕೊಂಡಿದ್ದರು. ಈಗ ಅದೆಲ್ಲ ಬದಲಾಗುತ್ತಿವೆ. ಉದಾಹರಣೆಗಾಗಿ, ಯುವಕ ಯುವತಿಯರಲ್ಲಿ ಲೈಂಗಿಕ ಕ್ರಿಯೆ ನಡೆಯುತ್ತಿದ್ದ ಜೋಡಿಗಳೂ ಕೂಡ ಕೆಲವು ಕಾಲದ ನಂತರ ಸಂಬಂಧ ಮುರಿದುಕೊಂಡಿದ್ದು ಕಂಡುಬಂತು. ಕಾರ್ಯಾಗಾರದ ನಂತರ ನನ್ನ ತಲೆಯಲ್ಲಿ ವಿಚಾರಗಳು ಓಡಲು ಆರಂಭಿಸಿದವು. ದಾಂಪತ್ಯಗಳು ಮುಂಚೆ ಹೀಗಿದ್ದವು, ಈಗ ಹೀಗಾಗಿವೆ. ಇನ್ನು ಮುಂದೆ ಏನಾಗಬಹುದು? ನಮ್ಮ ದಾಂಪತ್ಯಗಳು ಎತ್ತ ಸಾಗುತ್ತಿವೆ? ಮುಂದೆ ಹೇಗಿರಬಹುದು? ಅಲ್ಲದೆ, ಭವಿಷ್ಯದಲ್ಲಿ ದಾಂಪತ್ಯಗಳನ್ನು ಪ್ರವೇಶಿಸಲಿರುವ ಮಕ್ಕಳಿಗೆ ಹಿರಿಯರ ಮಾರ್ಗದರ್ಶನದ ಅಗತ್ಯವಿದೆಯೆ? ಮುಂದೆ ಮದುವೆಯಾಗುವವರು ಏನೇನು ಸಿದ್ಧತೆ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಬರೆಯಬೇಕು ಎನ್ನಿಸಿತು. ಇದನ್ನೆಲ್ಲ ಮುಂದಿನ ಸಂಚಿಕೆಗಳಲ್ಲಿ ಕಾಣುವಿರಂತೆ.

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.